

## ವೈನಾದ ವೈನ್ ಸ್ಟೋರ್!

ಈಗ ಯೂಟ್ಯೂಬ್‌ನಲ್ಲಿ ಮೆರೆಯುತ್ತಿರುವವರು ಯಾರು ಎಂಬುದನ್ನು ಕುತೂಹಲಕ್ಕಾಗಿ ಗೂಗಲ್ ಬಳಿ ಕೇಳಿದಾಗ ಅದು ಒಂದೆರಡಲ್ಲ, ಹಲವು ಆಯ್ಕೆಗಳನ್ನು ಮುಂದಿಟ್ಟಿತು. ಕಾಮಿಡಿ, ವ್ಲೋಗಿಂಗ್, ಎಜುಕೇಷನ್, ಅಡುಗೆ ಹೀಗೆ ಬಗೆಬಗೆಯ ವಿಷಯಗಳ ಕುರಿತಾದ ಯೂಟ್ಯೂಬ್ ಚಾನಲ್‌ಗಳ ಸಾಲೇ ಎದುರುಗೊಂಡಿತು. ಅದರಲ್ಲಿಯೂ ಕಾಮಿಡಿ ವಿಡಿಯೊಗಳನ್ನು ಉಣಬಡಿಸುವ ಯೂಟ್ಯೂಬ್ ಚಾನಲ್‌ಗಳಿಗಂತೂ ಚಂದಾದಾರರ ಸಂಖ್ಯೆ ಅಚ್ಚರಿ ಹುಟ್ಟಿಸುತ್ತಿದೆ.

ಜಮಖಂಡಿಯ ಮಲ್ಲು ಎಂಬವರು ಯೂಟ್ಯೂಬ್‌ನಲ್ಲಿ ಕಾಮಿಡಿ ವಿಡಿಯೊಗಳನ್ನು ರೂಪಿಸಿ ಅಪ್‌ಲೋಡ್ ಮಾಡುತ್ತಾರೆ. ಅವರ ಯೂಟ್ಯೂಬ್ ಚಾನಲ್ ಹೆಸರು 'ಮಲ್ಲು ಜಮಖಂಡಿ' (https://bit.ly/3Ok4K0q) ಎಂದೇ ಇದೆ. ಹತ್ತಿರ ಹತ್ತಿರ ಹತ್ತು ಲಕ್ಷ ಜನರು ಈ ಚಾನಲ್‌ಗೆ ಚಂದಾದಾರರಾಗಿದ್ದಾರೆ. ಅವರು ರೂಪಿಸುವ ಹದಿನೈದು ನಿಮಿಷದಿಂದ ಅರ್ಧಗಂಟೆಗಳ ವಿಡಿಯೊಗಳನ್ನು ಲಕ್ಷಾಂತರ ಜನರು ನೋಡುತ್ತಾರೆ. 'ಶಿವಪುತ್ರ ಯಶಾರದ' (https://bit.ly/3QJlsb6) ಎಂಬ ಯೂಟ್ಯೂಬ್ ಚಾನಲ್ ಕೂಡ ಕಾಮಿಡಿ ವಿಡಿಯೊಗಳಿಗೆ ಸಾಕಷ್ಟು ಹೆಸರುವಾಸಿಯಾಗಿದೆ. ಸುಮಾರು 17 ಲಕ್ಷ ಚಂದಾದಾರರು ಈ ಚಾನಲ್‌ಗೆ ಇದ್ದಾರೆ.

'ರಘು ವೈನ್ ಸ್ಟೋರ್' ಹೊಸ ರೀತಿಯ ಆಲೋಚನೆಗಳ ಕಾರಣಕ್ಕೆ ಗಮನಸೆಳೆಯುವ ಯೂಟ್ಯೂಬ್ ಚಾನಲ್.

ಯೂಟ್ಯೂಬ್ ಬಗ್ಗೆ ಅಷ್ಟೇನು ತಿಳಿದುಕೊಳ್ಳದೇ ಕಾಲಿಟ್ಟಿದ್ದ ರಘು ಅವರ ಚಾನಲ್‌ಗೆ ಇಂದು ಮೂರು ಲಕ್ಷದವರೆಗೂ ಚಂದಾದಾರರಿದ್ದಾರೆ. ಕನ್ನಡದಲ್ಲಿ ಹಾಸ್ಯವನ್ನು ಭಿನ್ನ ಧಾಟಿಯಲ್ಲಿ ಪ್ರಸ್ತುತಪಡಿಸುವ ಹಂಬಲದೊಂದಿಗೆ ಹುಟ್ಟುಹಾಕಿದ ಚಾನಲ್ ಅವರಿಗೆ ಆದಾಯ ತರುತ್ತಿದೆ.

'ಮೊದಲು ನಾನು ವಿಡಿಯೊಗಳನ್ನು ಮಾಡಿ ಫೇಸ್‌ಬುಕ್‌ನಲ್ಲಿ ಹಾಕುತ್ತಿದ್ದೆ. ಅದಕ್ಕೆ ದಿಕ್ಕುದೆಸೆ ಎಂಬುದೇ ಇರಲಿಲ್ಲ. ಯೂಟ್ಯೂಬರ್ ಆಗುವ, ಅದರಿಂದ ಹಣ ಗಳಿಸುವ ಯಾವುದೇ ಆಲೋಚನೆ ಇರಲಿಲ್ಲ. ಎಲ್ಲಾ ವಿಡಿಯೊಗಳು ಒಂದೇ ಕಡೆ ಸಿಗಬೇಕೆಂಬ ಕಾರಣಕ್ಕೆ 2018ರಲ್ಲಿ 'ರಘು ವೈನ್ ಸ್ಟೋರ್' (https://bit.ly/3tRt5Cw) ಎಂಬ ಯೂಟ್ಯೂಬ್ ಚಾನಲ್ ಆರಂಭಿಸಿದ್ದೆ. ಇಲ್ಲಿಗೆ ಕಾಲಿಟ್ಟ ಮೇಲಷ್ಟೇ ನನಗೆ ಇಲ್ಲಿ ಬೇರೆಯದೇ ಪ್ರಪಂಚ ಇದೆ ಎಂದು ತಿಳಿದಿದ್ದು. ಯೂಟ್ಯೂಬ್‌ನಲ್ಲಿ, ಅದರಲ್ಲೂ ಕನ್ನಡದಲ್ಲಿ ವೈಯಕ್ತಿಕ ಚಾನಲ್‌ಗಳು ಆಗ ಕಡಿಮೆ ಇದ್ದವು. ನನಗೆ ಸಂಪೂರ್ಣ ಹಾಸ್ಯದ ವಿಡಿಯೊ ಮಾಡಬೇಕೆನ್ನುವ ಆಸೆ. ಇದರಲ್ಲಿ ಯಶಸ್ಸು ಕಾಣಬೇಕೆಂದು ಒಬ್ಬನೇ ಬಹುವ್ಯಕ್ತಿ ಅಭಿನಯ, ಕೊಲಾಜ್, ಮ್ಯೂಸಿಕ್ ವಿಡಿಯೊ, ಸ್ಕಿಟ್ ಎಲ್ಲವನ್ನೂ ಪ್ರಯತ್ನಿಸಿದೆ' ಎಂದು ಯೂಟ್ಯೂಬ್‌ನಲ್ಲಿ ತಾವಿಟ್ಟ ಮೊದಲ ಹೆಜ್ಜೆಗಳನ್ನು ನೆನಪಿಸಿಕೊಳ್ಳುತ್ತಾರೆ ರಘು.

ಯೂಟ್ಯೂಬ್ ಉತ್ತಮ ಆದಾಯದ ಮೂಲವಾಗಬಲ್ಲದು ಎನ್ನುವ ಅವರು, 'ಯೂಟ್ಯೂಬ್ ಆರಂಭಿಸುತ್ತಿದ್ದಂತೆಯೇ ಹಣ ಬಯಸಬಾರದು. ಮೊದಲು ಏನು ಮಾಡಬೇಕು, ಹೇಗೆ ಮಾಡಬೇಕು, ಭಿನ್ನವಾಗಿ ಹೇಗೆ ಅಭಿವ್ಯಕ್ತಗೊಳಿಸಬೇಕು ಎಂಬುದರ ಬಗ್ಗೆ ಯೋಚಿಸಿ. ಯಾವುದೇ ಒತ್ತಡಕ್ಕೆ ಬೀಳದೇ ಪ್ರಯತ್ನ ಮುಂದುವರೆಸಿ. ಸ್ಥಿರತೆ, ಪೂರ್ವ ಯೋಜನೆ, ಅನನ್ಯತೆ ಮಾತ್ರ ನಿಮ್ಮ ಚಾನಲ್ ಮುನ್ನಡೆಸಲು ಸಾಧ್ಯ. ವಿಷಯ ತಾಜಾ ಹಾಗೂ ಗಟ್ಟಿಯಾಗಿದ್ದರೆ ಜನರು ಒಪ್ಪಿಕೊಂಡೇ ಒಪ್ಪಿಕೊಳ್ಳುತ್ತಾರೆ' ಎಂದು ಕಿವಿ ಮಾತು ಹೇಳುತ್ತಾರೆ.

'ಯೂಟ್ಯೂಬ್‌ನಲ್ಲಿ ತಿಂಗಳ ಸಂಬಳ ಇರುವುದಿಲ್ಲ. ಎಷ್ಟು ವಿಡಿಯೊ ಮಾಡುವಿರಿ? ಎಷ್ಟು ಚೆನ್ನಾಗಿ ಓಡುತ್ತದೆ? ಎಷ್ಟು ಸ್ಥಿರತೆ



ರಘು